ಹೈವೆ ನಂ. ೪೮ರಲ್ಲಿ ಬೈಪಾಸ್ ರೋಡ್ ಮಾಡಬೇಕೆಂದು ವಿವರಣೆ ಕೊಟ್ಟಿರುತ್ತಾರೆ. ಆದರ ಬಗ್ಗೆ ಏನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆಂದು ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ.

ಶ್ರೀ ಕೊಡಗಿಯವರು ವಾಹನ ಸಂಚಾರಕ್ಕೆ ಇರತಕ್ಕಂಥ ತೊಂದರೆಗಳನ್ನು ಹೇಳಿದರು. ಎಲ್ಲೆಲ್ಲಿಯೂ ಈ ರೀತಿ ವಾಹನಗಳಿಗೆ ಸಂಚಾರಕ್ಕೆ ತೊಂದರೆಯಾಗಿರುತ್ತದೆಂದು ಹೇಳುವ ಮಾತು ಸರಿಯಾದುದಲ್ಲ. ನಾನು ಒಂದೆರಡು ರಸ್ತೆಗಳನ್ನು ವಾಹನ ಸಂಚಾರಕ್ಕೆ ಬಿಡುಗಡೆ ಮಾಡತಕ್ಕಂಥ ಸಂದರ್ಭದಲ್ಲಿ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿರುತ್ತೇವೆ ಎನ್ನುವುದರ ಬಗ್ಗೆ ತಿಳಿಸಿರುತ್ತೇನೆ. ನನಗೆ ಬಂದಿರುವ ವರದಿಯ ಪ್ರಕಾರವಾಗಿ ಕೊನೆ ಪಕ್ಷ ಟೆಂಪರರಿ ಕಾರ್ಯಕ್ರಮಗಳನ್ನಾದರೂ ಹಾಕಿಕೊಳ್ಳಿ ಎಂದು ಹೇಳಿರುತ್ತಾರೆ. ಮಾನ್ಯ ಸದಸ್ಯರು ವಿವರಗಳನ್ನು ಕೊಟ್ಟರೆ ಅದನ್ನು ಇಲಾಖೆಗೆ ತಿಳಿಸಿ ತಕ್ಷಣ ವಾಹನ ಸಂಚಾರಕ್ಕೆ ಅನುಕೂಲವನ್ನು ಮಾಡಿಕೊಡುವಂಥ ಏರ್ಪಾಡನ್ನು ಮಾಡುತ್ತೇನೆಂದು ಹೇಳುತ್ತೇನೆ,

ಇನ್ನು ಪರಿಹಾರ ಕಾರ್ಯಕ್ರಮಗಳ ಬಗ್ಗೆ ಹೇಳುವುದಾದರೆ. ದಕ್ಷಿಣ ಕನ್ನಡ ಜಿಲ್ಲೆ ಪರಿಹಾರ ಕಾರ್ಯಕ್ರಮಗಳಿಗೆ ಹೆಚ್ಚಿನ ಹಣವನ್ನು ಒದಗಿಸಬೇಕೆಂದು ಅನೇಕ ಮಾನ್ಯ ಸದಸ್ಯರು ಹೇಳಿರುತ್ತಾರೆ. ಈ ಪರಿಹಾರ ಕಾರ್ಯಕ್ರಮಕ್ಕಾಗಿ ಇಟ್ಟಿರುವ ೫೬ ಲಕ್ಷ ರೂಪಾಯಿಗಳಲ್ಲಿ ೩೧ ಲಕ್ಷ ರೂಪಾಯಿಗಳಷ್ಟು ದಕ್ಷಿಣ ಕನ್ನಡ ಜಿಲ್ಲೆಯೊಂದಕ್ಕೇನೇ ಕೊಟ್ಟಿರುತ್ತೇವೆ. ಕಾರವಾರ ಜಿಲ್ಲೆಯಲ್ಲಿ ಅನೇಕ ಭಾಗಗಳಲ್ಲಿಯೂ ಕೂಡ ಇದೇ ರೀತಿಯಾದ ತೊಂದರೆಗಳು ಉಂಟಾಗಿರುತ್ತವೆ. ಶಿವಮೊಗ್ಗ ಜಿಲ್ಲೆಯೂ ಕೂಡ ಈ ರೀತಿಯಾದ ತೊಂದರೆಗೆ ಒಳಗಾಗಿರುತ್ತದೆ ಚಿಕ್ಕಮಗಳೂರು ಜಿಲ್ಲೆ ಮತ್ತು ಕೊಡಗುಜಿಲ್ಲೆಯ ಬಹುಭಾಗದ ವರದಿ ನಮ್ಮಲ್ಲಿ ಬಂದಿಲ್ಲ. ಈಗ ನಮಗೆ ಕೊಟ್ಟಿರತಕ್ಕಂಥ ೫೬ ಲಕ್ಷ ರೂಪಾಯಿಗಳು ಏನೇನು ಸಾಕಾಗುತ್ತಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಮಾನ್ಯ ಮಿತ್ರರು ಪರಿಹಾರ ಕಾರ್ಯಗಳಿಗಾಗಿ ಎಷ್ಟೆಷ್ಟು ಹಣ ಬೇಕಾಗುತ್ತದೆ ಎನ್ನುವುದರ ಬಗ್ಗೆ ಅಂಕಿ ಅಂಶಗಳ ಸಮೇತ ವಿವರಗಳನ್ನು ಕೊಟ್ಟರೆ ಆದರ ಬಗ್ಗೆ ಸೂಕ್ತ ಕ್ರಮ ತೆಗೆದು ಕೊಳ್ಳಲು ಪ್ರಯತ್ನ ಪಡುತ್ತೇನೆಂದು ಹೇಳುತ್ತೇನೆ.

ಮಾನ್ಯ ಮೊಹಿಯುದ್ದೀನ್‌ರವರು ಪ್ರಸ್ತಾಪ ಮಾಡುತ್ತಾ ಈ ರೀತಿ ಟೆಂಪರರಿಯಾಗಿ ಮಾಡತಕ್ಕಂಥಾದ್ದರ ಬದಲಾಗಿ ಖಾಯಂ ಆಗಿ ಪರಿಹಾರ ಕಾರ್ಯಗಳು ಆಗಬೇಕೆಂದು ಹೇಳಿದರು, ಆದರ ಬಗ್ಗೆ ಏನೇನೂ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಆದರ ಬಗ್ಗೆ ಎಸ್ಟಿಮೇಟ್ ಪ್ರಿಪೇರ್ ಮಾಡುತ್ತಿದ್ದಾರೆ. ಉದಾಹರಣೆಗೆ ನ್ಯಾಷನಲ್ ಹೈವೇ ಇದಕ್ಕೆ ಗೌರ್ನಮೆಂಟ್ ಆಫ್ ಇಂಡಿಯಾದ್ದು ಹಣ ಬರುವುದು ಇರುತ್ತದೆ. ಮೇಜರ್ ಡಿಪ್ಟಿಕ್ಟ್‌ಗೆ ಎಷ್ಟು ಹೈವೇ ಆಗಬೇಕಾಗಿರುತ್ತದೆ. ಇದಕ್ಕೆ ಎಷ್ಟು ಹಣ ಖರ್ಚು ಮಾಡಬೇಕಾಗಿರುತ್ತದೆ. ಅದನ್ನು ಮಾಡುತ್ತೇನೆ. ೩೧ ಲಕ್ಷ ರೂಪಾಯಿಗಳನ್ನು ದಕ್ಷಿಣ ಕನ್ನಡ ಜಿಲ್ಲೆಯೊಂದಕ್ಕೆ ಖರ್ಚು ಮಾಡುತ್ತಿರುವುದರಿಂದ ಉಳಿದ ಜಿಲ್ಲೆಗಳ ಕಡೆಗೂ ಹೆಚ್ಚಿನ ಗಮನವನ್ನು ಕೊಡಬೇಕಾಗಿರುತ್ತದೆಂದು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು.

MATTER UNDER RULE 312

(i) re : Reduction in seats for M.A. Economics of Bangalore University

† ಶ್ರೀ ಬಿ. ವಿ. ರಾಮಚಂದ್ರ ರೆಡ್ಡಿ (ವರತೂರು).—ಸನ್ಮಾನ್ಯ ಅಧ್ಯಕ್ಷರೇ ನಾನು ೩೧೨ ನೆಯ ನಿಯಮದ ಪ್ರಕಾರ ಬೆಂಗಳೂರು ವಿಶ್ವವಿದ್ಯಾನಿಲಯದ ಎಂ. ಎ. ಎಕನಾಮಿಕ್ಸ್‌ನಲ್ಲಿ ಸೀಟ್‌ಗಳನ್ನು ಕಡಿಮೆ ಮಾಡಿರುವುದರಿಂದ ವಿದ್ಯಾರ್ಥಿಗಳಿಗೆ ಆಗುತ್ತಿರುವ ತೊಂದರೆಗಳ ಬಗ್ಗೆ ಕೆಲವು ಅಂಕಿ ಅಂಶಗಳನ್ನು ತಮ್ಮ ಮುಖಾಂತರ ಸರ್ಕಾರಕ್ಕೆ ತಿಳಿಸಬಯಸುತ್ತೇನೆ.

ಸ್ವಾಮಿ, ಈ ಕೋರ್ಸಿನಲ್ಲಿ ಕಳೆದ ವರ್ಷಗಳು ಇದ್ದ ಸೀಟುಗಳು ಒಟ್ಟು ಸಂಖ್ಯೆ ಈ ಪ್ರಕಾರ ಇದೆ. ಕಾಲೇಜ್ ೧೯೭೦ ರಲ್ಲಿ ೫೦ ಸೀಟುಗಳು ೧೯೭೧ರಲ್ಲಿ ೮೫ ಸೀಟ್‌ಗಳು; ೧೯೭೨ರಲ್ಲಿ ೧೫೦ ಸೀಟ್‌ಗಳು. ೧೯೭೩ರಲ್ಲಿ ೧೮೦ ಸೀಟ್‌ಗಳು ೧೯೭೪ರಲ್ಲಿ ೨೧೮ ಸೀಟ್‌ಗಳು ಇದ್ದುವು. ೧೯೭೪ರಲ್ಲಿ ಸಂಜೆ ಕಾಲೇಜ್‌ನಲ್ಲಿ

೫೦ ಸೀಟ್‌ಗಳು ಇದ್ದುವು. ೧೯೭೫ರಲ್ಲಿ ಬೆಳಗಿನ ವೇಳೆಯಲ್ಲಿ ೫೦ ಸೀಟ್‌ಗಳು ಇದ್ದರೆ ಸಾಯಂಕಾಲ ೫೦ ಸೀಟ್‌ಗಳು ಇದ್ದುವು. ೧೯೭೬ರಲ್ಲಿ ೬೦–೫೦ ಸೀಟ್‌ಗಳು ೧೯೭೭ರಲ್ಲಿ ೬೦—೫೦, ೧೯೭೮ರಲ್ಲಿ ಬೆಳಿಗ್ಗೆ ೬೦ ಮತ್ತು ಸಾಯಂಕಾಲ ೬೦ ಸೀಟ್‌ಗಳು ಇರುತ್ತದೆ.

ಮೊದಲು ಇದರ ಜೊತೆಗೆ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಆನರ್ಸ್ ಕೋರ್ಸ್ ಇತ್ತು, ಈಗ ಆ ಕೋರ್ಸ್‌ಗಳನ್ನು ತೆಗೆದು ಹಾಕಲಾಗಿದೆ. ಆ ಬಗ್ಗೆ ಸರ್ಕಾರವನ್ನು ಕೇಳುವುದೇನೆಂದರೆ ಮೊದಲನೆಯ ದಾಗಿ ಹೇಳುವುದಾದರೆ ೧೯೭೫ನೇ ಇಸವಿಯಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿ ಬೆಳೆಯಿತು. ಇದಕ್ಕೆ ಸುಮಾರು ೩ ಹೆಚ್ಚು ಜಿಲ್ಲೆಗಳನ್ನು ಸೇರಿಸಲಾಗಿದೆ. ಪದವಿ ಪಡೆದ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದ್ದು ಕೋರ್ಸಿನ ಸೀಟುಗಳ ಬೇಡಿಕೆ ಅಧಿಕವಾಯಿತು. ಈಗ ದುರದೃಷ್ಟವಶಾತ್ ಸೀಟುಗಳ ಸಂಖ್ಯೆ ಕಡಿಮೆ ಮಾಡಲಾಯಿತು.

ಎರಡನೆಯದಾಗಿ ೧೯೭೪ರಲ್ಲಿ ಇದ್ದ ಅಧ್ಯಾಪಕರ ಸಂಖ್ಯೆಯನ್ನು ಇಳಿಸಿಲ್ಲ. ಸೀಟುಗಳನ್ನು ಮಾತ್ರ ಇಳಿಸಲಾಗಿದೆ. ಅಂದರೆ ಈಗ ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರಿಗೆ ಪೂರ್ತಿ ಕೆಲಸವಿಲ್ಲ ಎಂದು ಭಾವಿಸ ಬೇಕಾಗುತ್ತದೆ. ಆದ್ದರಿಂದ ಅವರನ್ನು ಸರ್ಕಾರ ಏನಾದರೂ ಪಿಕ್‌ನಿಕ್‌ಗೆ ಕಳುಹಿಸಿದೆಯೇ ? ಅಧ್ಯಾಪಕ ರಿದ್ದು ಅವರನ್ನು ಉಪಯೋಗಿಸದೇ ಸೀಟುಗಳನ್ನು ಕಡಿಮೆ ಮಾಡಿರುವುದು ಕೇವಲ ರಾಜಕೀಯ ಏನ್ನ ಬೇಕಾಗುತ್ತದೆ.

ಸ್ವಾಮಿ ಈ ಎಕನಾಮಿಕ್ಸ್ ವಿಭಾಗದಲ್ಲಿ ವಿಶ್ವವಿಖ್ಯಾತ ಪ್ರೊಫೆಸರ್ ವೆಂಕಟಗಿರಿಗೌಡರು ಇದ್ದಾರೆ. ಇವರ ಆರ್ಹತೆ ಇಲ್ಲಿನವರಿಗೆ ಅರ್ಥವಾಗಿದ್ದರೂ ವಿದೇಶಗಳಲ್ಲಿ ಇವರನ್ನು ಸನ್ಮಾನಿಸಿದ್ದರೂ ಇಂತಹವರ ಸಂಪೂರ್ಣ ಉಪಯೋಗ ಪಡೆಯದಿರುವುದು ಬಹಳ ಶೋಚನೀಯ. ಆದ್ದರಿಂದ ನಮ್ಮ ವಿದ್ಯಾರ್ಥಿಗಳಿಗೆ ಇಂತಹ ಉನ್ನತ ಅಧ್ಯಾಪಕರ ಸೇವೆಯನ್ನು ಹೆಚ್ಚಿನ ಸಂಖ್ಯೆಯಲ್ಲಿ ಸರ್ಕಾರ ದೊರಕಿಸಿ ಈಗ ಸರ್ಕಾರ ಎಂ.ಎ. ಎಕ್ನನಾಮಿಕ್ಸ್ ಸೀಟುಗಳನ್ನು ಹೆಚ್ಚು ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಕೆ. ಎಲ್. ಮರಿಸ್ವಾಮಿ.— ಸ್ವಾಮಿ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ೧೯೭೪ನೇ ಇಸವಿಯಲ್ಲಿ ೨೦೦ ಚಿಲ್ಲರೆ ವಿದ್ಯಾರ್ಥಿಗಳಿಗೆ ಈ ಒಂದು ಎಂ. ಎ. ಅರ್ಥಶಾಸ್ತ್ರದ ವ್ಯಾಸಂಗಕ್ಕೆ ಪ್ರವೇಶಾವ ಕಾಶ ಇತ್ತು. ನಂತರ ಬರಬರುತ್ತಾ ೭೦, ೬೦ ಮತ್ತು ೫೦ ಹೀಗೆ ಇಳಿಯುತ್ತಾ ಇದೆ. ಡೇ ಕಾಲೇಜಿಗೂ ೬೦ ಜನ ತೆಗೆದುಕೊಳ್ಳುವ ಹಾಗೆ ಮಾಡಿಕೊಂಡಿದ್ದಾರೆ, ನೈಟ್ ಕಾಲೇಜಿಗೂ ೬೦ ಜನ ತೆಗೆದುಕೊಳ್ಳುವ ಹಾಗೆ ಮಾಡಿಕೊಂಡಿದ್ದಾರೆ. ಈ ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ತುಮಕೂರು, ಕೋಲಾರ ಮತ್ತು ಗ್ರಾಮಾಂತರ ಪ್ರದೇಶಗಳ ಕಾಲೇಜುಗಳೂ ಸಹ ಸೇರಿದೆ. ಈವೊತ್ತಿನ ದಿವಸ ಈ ಎಲ್ಲಾ ಕಾಲೇಜು ಗಳಲ್ಲೂ ಕೂಡ ಬಿ.ಎ. ಬಿ.ಎಸ್.ಸಿ. ಮತ್ತು ಬಿ. ಕಾಂ. ಪಾಸು ಮಾಡಿಕೊಂಡಂಥಾ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿಯಾಗಿದೆ. ಅವರು ಪಾಸು ಮಾಡಿಕೊಂಡರೂ ಸಹ ಈವೊತ್ತಿನ ದಿವಸ ಅವರಿಗೆ ಉದ್ಯೋಗ ಸಿಕ್ಕುತ್ತಾ ಇಲ್ಲ. ಆದುದರಿಂದ ಕೊನೇ ಪಕ್ಷ ಅವರು ಎಂ. ಎ. ಓದುವುದಕ್ಕಾದರೂ ಸಹ ಒಂದು ಹೆಚ್ಚಿನ ಅವಕಾಶ ಮಾಡಿಕೊಡದೇಹೋದರೆ ಹೇಗೆ ? ಈ ೬೦ ಸೀಟುಗಳಲ್ಲಿ ರಿಸರ್ವ್ ಕೋಟಾ ಅಷ್ಟು ಇದೆ. ಸಾಮಾನ್ಯವಾಗಿ ಎಂ.ಎ. ಎಕನಾಮಿಕ್ಸ್‌ಗೆ ಹೆಚ್ಚು ಸೀಟುಗಳು ಸಿಗಬೇಕಾದರೆ ಬೆಂಗಳೂರು ನಗರ ದಲ್ಲಿರುವ ಅಧಿಕಾರಿಗಳ ಮಕ್ಕಳಿಗೆ, ಎಂ.ಎಲ್.ಎ. ಮಕ್ಕಳಿಗೆ ದೊಡ್ಡ ದೊಡ್ಡ ಮನುಷ್ಯರ ಮಕ್ಕಳಿಗೆ ಸಿಕ್ಕುತ್ತದೇ ವಿನಾ ತಾಲ್ಲೂಕು ಮಟ್ಟದಲ್ಲಿರುವ ಮತ್ತು ಗ್ರಾಮಾಂತರ ಮಟ್ಟದಲ್ಲಿರುವ ಹುಡುಗರಿಗೆ ಸೀಟು ಸಿಕ್ಕುವುದು ಕಡಿಮೆ ಹಿತಕ್ಕೆಂದರೆ ಪಟ್ಟಣದಲ್ಲಿರುವ ಮಕ್ಕಳು ಇಂಗ್ಲೀಷ್ ಚೆನ್ನಾಗಿ ಓದಿ ತಿಳಿದು ಕೊಂಡಿರುವುದರಿಂದ ಮೆರಿಟ್‌ನಲ್ಲಿ ಆಗಲಿ ಯಾವುದರಲ್ಲಾಗಲಿ ಬಂದು ಬಿಡುತ್ತಾರೆ. ಗ್ರಾಮಾಂತರ ಪ್ರದೇಶ ದಲ್ಲಿರುವ ಹುಡುಗರು ದನಕರುಗಳನ್ನು ಮೇಯಿಸಿಕೊಂಡು, ಕುರಿಗಳನ್ನು ಮೇಯಿಸಿಕೊಂಡು ಎಮ್ಮೆ ಇವುಗಳನ್ನು ಮೇಯಿಸಿಕೊಂಡು ಇದರ ಮಧ್ಯೆ ಆ ಮಕ್ಕಳು ಕಷ್ಟಪಟ್ಟು ಓದಿಕೊಂಡು ೪೦–೫೦ ಪರ್ಸೆಂಟ್ ತೆಗೆದುಕೊಂಡಿದ್ದರೂ ಕೂಡ ಅವರಿಗೆ ಇದರಲ್ಲಿ ಸೀಟು ಸಿಕ್ಕುವುದಿಲ್ಲ. ಆದುದರಿಂದ ಈ ಸಂದರ್ಭದಲ್ಲಿ ತಮಗೆ ಹೇಳುವುದೇನೆಂದರೆ ಈ ಎಂ.ಎ. ಎಕನಾಮಿಕ್ಸ್‌ನಲ್ಲಿ ಗ್ರಾಮಾಂತರ ಪ್ರದೇಶದಿಂದ ಬಂದಿರತಕ್ಕಂಥಾ ಮಕ್ಕಳಿಗೆ ಒಂದು ಫ್ರಿಫರೆನ್ಸ್ ಕೊಡುವ ಹಾಗೆ ಮಾಡಿ. ಈ ಸ್ಪೋರ್ಟ್ಸಿನಲ್ಲಿರುವವರಿಗೆ ಯಾವ ರೀತಿಯಾದ ಒಂದು ಫ್ರಿಫರೆನ್ಸ್‌ಗೆ ಮಾನ್ಯ ವಿದ್ಯಾ ಸಚಿವರು ಅವಕಾಶ ಮಾಡಿಕೊಟ್ಟಿದಾರೋ ಆದೇ ರೀತಿಯಾಗಿ ತಾವೂ ಕೂಡ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೂ ಕೂಡ ಈ ಒಂದು ವ್ಯಾಸಂಗದಲ್ಲಿ ಫ್ರಿಫರೆನ್ಸ್ ಕೊಟ್ಟು ಈ ಎಂಎ ಎಕನಾಮಿಕ್ಸ್‌ಗೆ ಸೀಟುಗಳನ್ನೂ ಸಹ ಹೆಚ್ಚಿಸಬೇಕೆಂದು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ.

ಶ್ರೀ ಮಳ್ಳೂರು ಆನಂದರಾವ್.—ಸ್ವಾಮಿ, ಎಂ.ಎ.ಗೆ ಸೀಟ್ ಕೊಡಬೇಕಾದರೆ ಯಾವ ಪ್ರೊಸೀಜರ್ ಪ್ರಕಾರ ಅಡಾಪ್ಟ್ ಮಾಡುತ್ತಾರೆ ಅನ್ನುವುದು ಒಂದು ಮತ್ತು ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನ ಒಂದು ರಿಸರ್ವೇಷನ್ ಬಿಟ್ಟು ಪೆರಿಟ್ ಮೇಲೆ ಕೊಡುತ್ತಿದ್ದಾರೆಯೇ ಅಥವಾ ಮೊನ್ನೆತಾನೇ ಈ ಬಗ್ಗೆ ಶ್ರೀಮಾನ್ ಹಾವನೂರ್‌ರವರ ಒಂದು ಕಮೀಷನ್ ರಿಪೋರ್ಟ್ ಏನು ಬಂದಿದೆ ಆ ಪ್ರಕಾರ ೫೦ ಪರ್ಸೆಂಟ್ ರಿಸರ್ವೇಷನ್ ಇರಬೇಕು ಎನ್ನುವ ಒಂದು ನಿಯಮವನ್ನು ಅನುಸರಿಸಿ ಮಾಡಿದ್ದಾರೆಯೇ? ಈ ಯೂನಿವರ್ಸಿಟಿಗೆ ನಾವು ಬೇಕಾದಷ್ಟು ದುಡ್ಡನ್ನು ಖರ್ಚು ಮಾಡುವಾಗ ಇವರು ಈ ಸೀಟುಗಳನ್ನು ಕೊಡುವುದಕ್ಕೆ ಯಾವ ನಿಯಮವನ್ನು ಅಪ್ಲೈ ಮಾಡುತ್ತಿದ್ದಾರೆ ಎನ್ನುವ ವಿವರಗಳನ್ನು ಮಾನ್ಯ ಮಂತ್ರಿಗಳು ತಿಳಿಸಿದರೆ ನಮಗೆ ಸ್ಪಷ್ಟವಾಗುತ್ತದೆ.

† ಶ್ರೀ ಬಿ. ಸಂಜೀವಯ್ಯಕೆಟ್ಟಿ (ವಿದ್ಯಾ ಶಾಖೆಯ ಮಂತ್ರಿಗಳು).—ಈಗ ಮಾನ್ಯ ಸದಸ್ಯರುಗಳು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಎಂ. ಎ. ಅರ್ಥಶಾಸ್ತ್ರದ ವ್ಯಾಸಂಗಕ್ಕೆ ಪ್ರವೇಶವಕಾಶವನ್ನು ಕಡಿಮೆ ಮಾಡಿರುವ ವಿಚಾರದ ಬಗ್ಗೆ ಕೇಳಿರುವುದರಿಂದ ಆ ಮಾಹಿತಿಯನ್ನು ಮಾತ್ರ ತರಿಸಿದ್ದೇನೆ. ಈಗ ಮಾನ್ಯ ಆನಂದರಾಯರು ಕೇಳಿರುವ ಪ್ರಶ್ನೆಗೆ ಉತ್ತರ ಹೇಳಬೇಕಾದರೆ ಅವರು ಈ ಯೂನಿವರ್ಸಿಟಿ ಬಗ್ಗೆ ಏನು ಒಂದು ನಿಯಮವನ್ನು ಇಟ್ಟಿದ್ದಾರೆ ಎಂದು ಮೊದಲೇ ಕೇಳಿದ್ದರೆ ಅದನ್ನೂ ಕೂಡ ಇಷ್ಟರ ವರೆಗೆ ತರಿಸುವುದಕ್ಕೆ ಸಾಧ್ಯವಾಗುತ್ತಿತ್ತು. ಆದುದರಿಂದ ಆ ಮಾಹಿತಿ ಇಲ್ಲ.

ಇನ್ನು ಮಾನ್ಯ ಸದಸ್ಯರು ಏನು ಹೇಳಿದರು ಎಂದರೆ ಈ ಸೀಟುಗಳನ್ನು ಸರ್ಕಾರದವರು ಮೊದಲು ಹೆಚ್ಚು ಮಾಡಿದರು, ನಂತರ ಕಡಿಮೆ ಮಾಡಿದ್ದಾರೆ ಎನ್ನುವ ಮಾತನ್ನು ಹೇಳಿದ್ದಾರೆ. ಆ ಬಗ್ಗೆ ಹೇಳಬೇಕಾದರೆ ಸರ್ಕಾರದವರು ಆ ಸೀಟುಗಳನ್ನು ಹೆಚ್ಚೂ ಮಾಡಿಲ್ಲಾ ಕಡಿಮೇನೂ ಮಾಡಿಲ್ಲಾ. ಯೂನಿವರ್ಸಿಟಿಯವರು ನಮಗೆ ಏನು ತಿಳಿಸಿದ್ದಾರೆ ಎಂದರೆ ೫೦ ಸೀಟುಗಳನ್ನು ಎಂ. ಎ, ಎಕನಾಮಿಕ್ಸ್ ಓದಲು ಯೂನಿವರ್ಸಿಟಿಯವರು ಇಟ್ಟಿದ್ದಾರೆ ಅಂತ ತಿಳಿಸಿದ್ದಾರೆ. ಈ ೫೦ ಸೀಟುಗಳನ್ನು ನಾವು ಯಾವಾಗಲೂ ಹೆಚ್ಚೂ ಮಾಡಿಲ್ಲಾ, ಕಡಿಮೇನೂ ಮಾಡಿಲ್ಲಾ. ಆದರೆ ಕೆಲವು ವರ್ಷದಲ್ಲಿ ಏನಾಯಿತು ಎಂದರೆ ಅನುಮತಿ ಇಲ್ಲದೆ ೫೦ಕ್ಕಿಂತ ಜಾಸ್ತಿ ಇದಕ್ಕೆ ತೆಗೆದುಕೊಂಡಿದ್ದರು, ಅನಂತರ ಇದನ್ನು ರ‍್ಯಾಟಿಫೈ ಮಾಡಿಕೊಂಡಿದ್ದಾರೆ. ಅದು ಆ ವರ್ಷಕ್ಕೆ ಮಾತ್ರ ಈ ಸೀಟುಗಳನ್ನು ಜಾಸ್ತಿ ಮಾ ಕೊಂಡಿತ್ತು ಎಂದು ಅವರು ತಿಳಿಸಿದ್ದಾರೆ. ಇನ್ನು ಮಾನ್ಯ ಸದಸ್ಯರು ಈ ಸೀಟುಗಳನ್ನು ಕಡಿಮೆ ಮಾಡಿದ್ದಾರೆ ಅಂತ ಹೇಳಿದ್ದಾರೆ. ಆದಕ್ಕೆ ನಾನು ಹೇಳುತ್ತೇನೆ, ಎಲ್ಲರಿಗೂ ಕೂಡ ಎಂ.ಎ.ಗೆ ಸೀಟು ಸಿಕ್ಕಬೇಕು ಎನ್ನುವ ವಿಚಾರ ಹೇಳಿದರೆ ಅದನ್ನು ಎಲ್ಲರೂ ಒಪ್ಪುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ಯೂನಿವರ್ಸಿಟಿಯವರು

[MR. CHAIRMAN.—(Sri H. T. Krishnappa) in the Chair]

ಈಗ ೫೦ ಸೀಟು ಇಟ್ಟಿದ್ದೇವೆ ಎಂದು ಹೇಳಿದ್ದಾರೆ. ನೀವು ಏನು ಹೇಳುತ್ತೀರಿ ಎಂದರೆ ಪರಿಸ್ಥಿತಿ ಬದಲಾವಣೆಯಾಗಿರುವುದರಿಂದ ವಿದ್ಯಾರ್ಥಿಗಳಿಗೆ ಕೆಲಸ ಸಿಗದೇ ಇರುವುದರಿಂದ ಇದಕ್ಕೆ ಹೆಚ್ಚು ಸೀಟುಗಳನ್ನು ಇಡಬೇಕು ಎಂದು ಹೇಳುತ್ತೀರಿ. ಎಂ.ಎ. ಓದುವುದಕ್ಕೆ ಅವರಿಗೆ ಅವಕಾಶ ಕೊಡಬೇಕು ಎಂದಂ ಹೇಳುತ್ತೀರಿ. ನಾಳೆ ದಿವಸ ಅವರೆಲ್ಲಾ ಎಂ. ಎ. ಪಾಸ್ ಮಾಡಿಕೊಂಡ ಮೇಲೆ ಅವಾಗ ಎಂ. ಎ. ಪಾಸು ಮಾಡಿಕೊಂಡರೂ ಕೂಡ ಅವರಿಗೆ ಕೆಲಸ ಸಿಕ್ಕುವುದಿಲ್ಲ ಆದುದರಿಂದ ಪಿ.ಹೆಚ್ ಡಿಗೆ ಓದುವುದಕ್ಕೆ ಕಳುಹಿಸಬೇಕು ಅಲ್ಲಿಗೆ ಹೆಚ್ಚು ಸೀಟುಗಳನ್ನು ಕೊಡಬೇಕು ಎಂದು ಏನಾದರೂ ಹೇಳುತ್ತೀರೋ ಏನೋ ಗೊತ್ತಿಲ್ಲ. ಈವಾಗ ನಿಮ್ಮ ಒಂದು ಅಂದಾಜಿನಂತೆ ಲೆಕ್ಕ ಹಾಕಿಕೊಂಡರೆ ಎಷ್ಟು ಜನ ಎಂ. ಎ. ಓದುವುದಕ್ಕೆ ಹೋಗುತ್ತಾರೆ ಅನ್ನುವುದನ್ನು ಯೋಚನೆ ಮಾಡಿದರೆ ಅದು ಗೊತ್ತಾಗುವುದಿಲ್ಲ. ಈಗ ತಾವು ಈ ಎಂ. ಎ. ಎಕನಾಮಿಕ್ಸ್‌ಗೆ ಸೀಟುಗಳ ಸಂಖ್ಯೆಯನ್ನು ಜಾಸ್ತಿ ಮಾಡಬೇಕು ಎಂದು ಕೇಳಿದ್ದೀರಿ. ನಾನು ಈ ವಿಚಾರದ ಬಗ್ಗೆ ಯೂನಿವರ್ಸಿಟಿಯವರ ಹತ್ತಿರ ಚರ್ಚೆ ಮಾಡುತ್ತೇನೆ,

SRI A LAKSHMISAGAR.—Another question that was specifically drew to your attention was whether the University would consider through the good offices of the Government to make a specific provision to accommodate SC/ST students for entry to M. A. Degree course, particularly M. A. (Economics).

SRI B. SUBBAYYA SHETTY.—I will agree with you. I will definitely take this question with the University.

SRI A. LAKSHMISAGAR.—Another point is that some weightage must be given to students coming from rural areas. There are certain advantages so far as students coming from urban areas as against the rural areas. It must receive proper attention by the Government.

SRI B.SUBBAYYA SHETTY.—About the question which he has asked, I also know the difficulties of students coming from rural areas, because I myself come from rural area. But I would like to know whether under the law we could do that distinction. If you could say that it could be done, definitely we can think of it.

SRI A. LAKSHMISAGAR.—I want to tall you one instance. So, far as admission to the Agricultural Science College is concerned, there is one condition *viz*; the student must be the son of an agriculturist. This question must also be considered on the same line. It will not be in conflict with Art. 14 of the Constitution. That may be examined.

ಶ್ರೀ ಬಿ. ವಿ. ರಾಮಚಂದ್ರರೆಡ್ಡಿ.—ಸುಮಾರು ೩೦೦ ಜನ ಹುಡುಗರಿಗೆ ಪಾಠ ಹೇಳಿ ಕೊಡುವಂಥಾ ಅಧ್ಯಾಪಕ ವರ್ಗ ಈ ವಿಶ್ವವಿದ್ಯಾನಿಲಯದಲ್ಲಿದೆ. ೧೯೭೪ನೇ ಇಸವಿಯಲ್ಲಿ ಈ ಒಂದು ಅಧ್ಯಾಪಕ ವರ್ಗ ಏನು ಇತ್ತು ಅದರಲ್ಲಿ ಯಾರನ್ನೂ ಕೂಡ ಇದುವರೆಗೆ ರಿಟ್ರೆಂಚ್ ಮಾಡಿಲ್ಲಾ ಆದುದರಿಂದ ಹೆಚ್ಚು ಸೀಟುಗಳನ್ನು ತೆಗೆದುಕೊಂಡು ಅವರನ್ನು ನೀವು ಏತಕ್ಕೆ ಉಪಯೋಗ ಮಾಡಿಕೊಳ್ಳಬಾರದು? ಸೀಟು ಕಡಿಮೆ ಮಾಡಿದರೆ ಅವರನ್ನು ತೆಗೆಯುವ ಪರಿಸ್ಥಿತಿ ಬರುತ್ತದೆ. ಹೆಚ್ಚಿನ ಸ್ಟ್ರೆಂಥ್ ಇಟ್ಟುಕೊಂಡು ಅವರಿಗೆ ಸಂಬಳ ಕೊಡುತ್ತಿದ್ದೀರಲ್ಲಾ ಆದಕ್ಕೆ ನಾನು ಹೇಳುವುದು ಏನೆಂದರೆ ಸೀಟುಗಳನ್ನು ಹೆಚ್ಚು ಮಾಡಿ ಆ ಅಧ್ಯಾಪಕ ವರ್ಗದವರನ್ನು ಏತಕ್ಕೆ ಉಪಯೋಗಿಸಿಕೊಳ್ಳಬಾರದು ಎಂದು ನಾನು ಈ ಸಂದರ್ಭದಲ್ಲಿ ತಮ್ಮನ್ನು ಕೇಳುತ್ತೇನೆ.

SRI B. SUBBAYYA SHETTY.—We will inform the University whatever the hon. Member said.

(ii) *re: Delay in settling pension of Paurakarmikas of Bagalkot Municipalities*

ಶ್ರೀ ಪಿ. ಕೆ. ಕಳ್ಳಿಗುಡ್ಡ (ಬಾಗಲಕೋಟೆ).—ಸ್ವಾಮಿ, ೩೦೨ನೇ ನಿಯಮದ ಮೇರೆಗೆ ಬಾಗಲಕೋಟೆ ಪುರಸಭೆಯ ಪೌರ ಕಾರ್ಮಿಕರ ನಿವೃತ್ತಿ ವೇತನದ ಬೇಡಿಕೆಯನ್ನು ಇತ್ಯರ್ಥ ಮಾಡುವಲ್ಲಿ ವಿಳಂಬವಾಗಿರುವ ಬಗ್ಗೆ ಮಾನ್ಯ ಮಂತ್ರಿಗಳ ಗಮನಸೆಳೆಯ ಬಯಸುತ್ತೇನೆ.

SRI H. C. SRIKANTIAH (Minister for Municipal Administration).—KarnatakaMunicipalities(Conditions of Serviceof Officers and Servants) Rules1972 came into force with effect from 22-5-1972.According to these rules, the employees who exercise option in favour of pension are eligible for pension from the consolidated funds subject to the condition that the municipality has to pay 1/8th of sanctioned salaries of the several appointments as pension contribution.